ಕಾರಣಗಳಿಗಾಗಿ ಕೃಷಿಭೂಮಿಯ ನಾಶ, ವಿದ್ಯುತ್ ಹಾಗೂ ನೀರಿನ ಬಳಕೆಯಲ್ಲಿ ಉಳಿತಾಯದ ಬದಲು ವಿಪರೀತ ಸೋರಿಕೆ, ತ್ಯಾಜ್ಯ ವಿಲೇವಾರಿಯಲ್ಲಿ ನಿರ್ಲಕ್ಷ್ಯ, ಇಂಗಾಲದ ಉತ್ಸರ್ಜನದಿಂದ ಉಂಟಾಗುವ ನೇರ ದುಷ್ಪರಿಣಾಮಗಳು, ಸಿಕ್ಕಿದ್ದನ್ನೆಲ್ಲಾ 'ಸ್ವಾಹಾ' ಮಾಡುತ್ತಿರುವ ನಮ್ಮ ನಗರಗಳು – ಇವು ಇಂಥ ಸಮಸ್ಯೆಗಳಿಗೆ ಕೆಲವು ಉದಾಹರಣೆಗಳು.

## ಪರಿಹಾರವಿಲ್ಲವೇ?

ಹಸಿವು–ಶೋಷಣೆಯಂತಹ ಮೂಲಭೂತ ಸಮಸ್ಯೆಗಳು ನಿವಾರಣೆಯಾಗಿ ನಮ್ಮ ದೇಶ ನಿಜವಾಗಿಯೂ ಮುಂದುವರಿಯಬೇಕಾದರೆ ಸರ್ಕಾರದ ನೀತಿಗಳು ಪ್ರಾಮಾಣಿಕವಾಗಿ, ಕೆಳಹಂತಗಳಲ್ಲಿ ಜಾರಿಯಾಗಬೇಕು. ಜೊತೆಗೆ ಇದರಲ್ಲಿ ಸಮಾಜದ, ಸಮುದಾಯದ ಪಾತ್ರವೂ ಬಹುದೊಡ್ಡದು. ಈ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದರೂ ಸೇರಿದಂತೆ, ಜಗತ್ತಿನ ಹಲವಾರು ವಿದ್ವಾಂಸರು, ಚಿಂತಕರು, ತಜ್ಞರು, 'ಆರ್ಥಿಕ ಅಭಿವೃದ್ಧಿಯಲ್ಲಿ ಧರ್ಮವು ಹೇಗೆ ಮಹತ್ವದ ಪಾತ್ರವನ್ನು ವಹಿಸಬಲ್ಲುದು' ಎನ್ನುವುದನ್ನು ಮತ್ತೆ ಮತ್ತೆ ನಿರೂಪಿಸಿದ್ದಾರೆ. ಭಗವದ್ಗೀತೆ–ಉಪನಿಷತ್ತುಗಳ ಬೋಧನೆಯು ಜನರಲ್ಲಿ ಮೌಲ್ಯಪ್ರಜ್ಞೆಯನ್ನು ಜಾಗೃತಗೊಳಿಸಿ ಅವರ ಕ್ರಿಯಾಶೀಲತೆ ಮತ್ತು ಕಾರ್ಯತತ್ಪರತೆಗಳನ್ನು ಹೆಚ್ಚಿಸುವಲ್ಲಿ ನೆರವಾಗುತ್ತದೆ. ಅಧ್ಯಾತ್ಮದ ಚಿಂತನೆಯು ಎಲ್ಲ ವರ್ಗದ ಮನುಷ್ಯರಲ್ಲಿಯೂ ಸೃಜನಶೀಲತೆಯನ್ನು ಅರಳಿಸುತ್ತದೆ. ಆ ಮೂಲಕ ಅವರ ಆಚಾರ ವಿಚಾರಗಳಲ್ಲಿ ವಿಶೇಷ ಪರಿವರ್ತನೆಯನ್ನು ತರಬಲ್ಲ ಸಾಮರ್ಥ್ಯ ಅದಕ್ಕಿದೆ. ಹೀಗೆ ಆರ್ಥಿಕರಂಗಕ್ಕೆ ಹೊರತಾದ ಕೆಲವು ಅಂಶಗಳು ಪರೋಕ್ಷವಾಗಿ ದೇಶದ ಅಭಿವೃದ್ಧಿಗೆ ಕಾರಣವಾಗಬಲ್ಲವು. ಮಾನವಕುಲದ ಬಯಕೆಗಳು ಹಲವು; ಲಭ್ಯವಿರುವ ಆಯ್ಕೆಗಳು ಕೆಲವು ಮಾತ್ರ; ಕೈಗೂಡುವ ಫಲಗಳು ಇನ್ನೂ ಕಡಮೆ. ನಮ್ಮ ಇಂದಿನ ಹಾಗೂ ಮುಂದಿನ ಪೀಳಿಗೆಯವರು ಬದುಕಿ ಬಾಳಬೇಕು ಎಂಬ ನಿಜವಾದ ಕಾಳಜಿ ಇದ್ದರೆ, ನಾವು ಕೆಲವು ದೀರ್ಘಾವಧಿಯ, ಸುಸ್ಥಿರವಾದ ಕಾರ್ಯಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು. ಹೀಗಾಗಬೇಕಾದರೆ, ವ್ಯಷ್ಟಿ ಹಿತಕ್ಕಿಂತ ಸಮಷ್ಟಿ ಹಿತ ಮೇಲುಗೈ ಪಡೆಯಬೇಕು. ಇದೇ ಹಸಿವು–ಶೋಷಣೆಗಳ ಅಂತ್ಯಕ್ಕೆ ಏಕಮಾತ್ರ ಪರಿಹಾರವಾಗಬಲ್ಲುದೇ ಹೊರತು, ಉಳಿದೆಲ್ಲ ಕ್ರಮಗಳು ಕೇವಲ ತಾತ್ಕಾಲಿಕವಷ್ಟೇ.

## ಸ್ನೇಹಪ್ರಭ

**ಸೋಲು ಗೆಲುವುಗಳು ಮನಸ್ಸಿನಲ್ಲಿ ಸುಖದುಃಖಗಳೆಂಬ ವಿರುದ್ಧ ರೀತಿಯ ವಿಕಾರಗಳನ್ನು ಮೂಡಿಸುತ್ತವೆ. ಹೀಗಿರುವಾಗ ಅವುಗಳನ್ನು ಸಮಾನ ದೃಷ್ಟಿಯಿಂದ ನೋಡಲು ಹೇಗೆ ತಾನೆ ಸಾಧ್ಯ?**

ಇದು ಸೋಲು ಗೆಲುವುಗಳ ಬಗ್ಗೆ ನಮ್ಮ ದೃಷ್ಟಿಕೋನವನ್ನು ಅವಲಂಬಿಸಿರುತ್ತದೆ. ಎಲ್ಲವನ್ನೂ ಸಕಾರಾತ್ಮಕ ದೃಷ್ಟಿಯಿಂದ ನೋಡುವವನಿಗೆ ಸೋಲು ಕೂಡ ಗೆಲುವಿಗೆ ಆಧಾರವಾಗುತ್ತದೆ. ಅಂಥ ವ್ಯಕ್ತಿ ಸೋಲಿನಿಂದ ಅನೇಕ ಪಾಠಗಳನ್ನು ಕಲಿಯುತ್ತಾನೆ. ಅವನಿಗೆ ಸೋಲುಗಳು ಯಶಸ್ಸಿನ ಮೆಟ್ಟಿಲುಗಳಾಗುತ್ತವೆ. ನಿಜವಾದ 'ಸೋಲು' ಅಂದರೆ ಸೋಲುವುದಲ್ಲ, ಸೋಲನ್ನು ಒಪ್ಪಿಕೊಳ್ಳುವುದು. ಬೀಳುವುದು ಸ್ವಾಭಾವಿಕ, ಆದರೆ ಬಿದ್ದ ಮೇಲೆ ಏಳದೇ ಇರುವುದೇ 'ನಿಜವಾದ ಸೋಲು'.

ಕೆಲವರಲ್ಲಿ ಸೋಲಿನ ಮನೋಭಾವವೇ ಮನೆಮಾಡಿಕೊಂಡಿರುತ್ತದೆ. ಅಂಥವರು ತಮಗರಿವಿಲ್ಲದಂತೆಯೇ ಸೋಲನ್ನು ಬಯಸುತ್ತಿರುತ್ತಾರೆ. ಅವರು ಯಾವುದೇ ಯೋಜನೆಯನ್ನು ಕೈಗೆತ್ತಿಕೊಂಡರೂ ಹೆಚ್ಚೆ ಹೆಚ್ಚಿಗೂ ಸೋಲನ್ನೇ ಅನುಭವಿಸುತ್ತಾರೆ. ಆದರೆ ತಮ್ಮ ಸೋಲಿಗೆ ಸಾಮಾಜಿಕ ಪರಿಸ್ಥಿತಿಗಳೇ ಕಾರಣ ಎಂದು ಸಮಾಜವನ್ನೂ, ವ್ಯಕ್ತಿಗಳನ್ನೂ ದೂಷಿಸುತ್ತಾರೆ. ಈ ಭ್ರಷ್ಟ ಸಮಾಜದಲ್ಲಿ ತಮ್ಮಂತಹ ಸಜ್ಜನರಿಗೆ ಸ್ಥಾನವಿಲ್ಲವೆಂದು ಕೊರಗುತ್ತಾರೆ. ಅಂಥವರಿಗೆ ಸೋಲೇ ಗೆಲುವು ತಾನೆ! ತಮ್ಮ ದುರದೃಷ್ಟವನ್ನು ಎಲ್ಲರ ಮುಂದೆಯೂ ಹೇಳಿಕೊಳ್ಳುತ್ತ ಒಂದು ರೀತಿಯ ವಿಚಿತ್ರ ಆನಂದವನ್ನು ಅವರು ಅನುಭವಿಸುತ್ತಾರೆ.

ಇಬ್ಬರು ವ್ಯಾಪಾರಿಗಳು ಒಂದು ಊರಿಗೆ ಚಪ್ಪಲಿ ಮಾರುವುದಕ್ಕೆ ಹೋದರು. ಅಲ್ಲಿಯ ಜನರಿಗೆ ಚಪ್ಪಲಿ ಹಾಕಿಕೊಳ್ಳುವ ಅಭ್ಯಾಸವಿರಲಿಲ್ಲ. ಒಬ್ಬ ವ್ಯಾಪಾರಿಯು, "ಈ ಜನರಿಗೆ ಚಪ್ಪಲಿ ಧರಿಸುವ ಅಭ್ಯಾಸವೇ ಇಲ್ಲದಿರುವುದರಿಂದ ಇಲ್ಲಿ ಚಪ್ಪಲಿಗೆ ಮಾರುಕಟ್ಟೆಯೇ ಇಲ್ಲ" ಎಂದು ಭಾವಿಸಿ ಹಿಂತಿರುಗಿದನು. ಇನ್ನೊಬ್ಬ ವ್ಯಾಪಾರಿಯು, "ಇಲ್ಲಿಯ ಜನರಾರೂ ಚಪ್ಪಲಿ ಹಾಕಿಕೊಳ್ಳದೇ ಇರುವುದರಿಂದ ಚಪ್ಪಲಿ ಚೆನ್ನಾಗಿ ಮಾರಾಟವಾಗುವ ಸಂಭವವಿದೆ" ಎಂದು ಭಾವಿಸಿ ಅಲ್ಲಿಯೇ ಉಳಿದನು. ಆದ್ದರಿಂದ ಸೋಲು ಗೆಲುವುಗಳು ನಮ್ಮ ದೃಷ್ಟಿಕೋನವನ್ನು ಅವಲಂಬಿಸಿವೆ.

ಎಡ್ಮಂಡ್ ಹಿಲರಿಯು ಎವರೆಸ್ಟ್ ಶಿಖರವನ್ನು ತಲುಪುವ ಪ್ರಯತ್ನದಲ್ಲಿ ಅನೇಕ ಬಾರಿ ಸೋತಿದ್ದನು. ಆದರೆ ಪ್ರತಿ ಸೋಲೂ ಅವನ ನಿರ್ಧಾರವನ್ನು ಇನ್ನೂ ಬಲಗೊಳಿಸಿತು. ಅವನು ಒಮ್ಮೆ ಎವರೆಸ್ಟ್ ಶಿಖರದ ಚಿತ್ರವನ್ನು ನೋಡುತ್ತ ಹೀಗೆ ಭಾವಿಸಿದನಂತೆ: "ನೀನು ಎಷ್ಟು ತಿರಸ್ಕರಿಸುತ್ತೀಯೋ, ನಿನ್ನನ್ನು ಗೆಲ್ಲುವ ನನ್ನ ನಿರ್ಧಾರ ಅಷ್ಟೂ ದೃಢವಾಗುತ್ತಿದೆ. ಏಕೆಂದರೆ ನೀನು ಪರ್ವತವಾಗಿರುವುದರಿಂದ ಬೆಳೆಯಲಾರೆ, ಆದರೆ ನಾನು ಮಾನವನಾಗಿರುವುದರಿಂದ ಇನ್ನೂ ಬೆಳೆಯಬಲ್ಲೆ."

ಬಾಬಾ ಆಮ್ಟೆಯವರು ಬಾಲಕರಾಗಿದ್ದಾಗ ನಡೆದ ಒಂದು ಘಟನೆ. ಅವರ ತಾಯಿಯವರು ಒಂದು ದಿನ ಮನೆಗೆ ಹಿಂದಿರುಗುವಾಗ ಒಂದು ಆಟದ ಬೊಂಬೆಯನ್ನು ತಂದರು. ಅದನ್ನು ಮಗನಿಗೆ ತೋರಿಸಿ ಹೇಳಿದರು, "ಈ ಬೊಂಬೆಯನ್ನು ನೀನು ಎಷ್ಟೇ ಪ್ರಯತ್ನಪಟ್ಟರೂ ಬೀಳಿಸಲಾಗುವುದಿಲ್ಲ. ಅದನ್ನು ಯಾವುದೇ ಕಡೆಗೆ ಬಗ್ಗಿಸಿದರೂ ಕೂಡಲೇ ನೇರವಾಗಿ ನಿಂತು ತನ್ನ ಸಮತೋಲನವನ್ನು ಕಾಪಾಡಿಕೊಳ್ಳುತ್ತದೆ." ಬಾಲಕನಿಗೆ ಅದರರ್ಥವೇನೆಂದು ತಿಳಿಯಲಿಲ್ಲ, ತಾಯಿಯ ಮುಖವನ್ನೇ ನೋಡುತ್ತ ನಿಂತುಕೊಂಡನು. ತಾಯಿ ವಿವರಿಸಿದರು, "ಇದೇ ರೀತಿ ನೀನೂ ಕೂಡ ಜೀವನದಲ್ಲಿ ಬೆಳೆಯಬೇಕು; ಎಷ್ಟೇ ಸೋಲನ್ನು ಅನುಭವಿಸಿದರೂ ಎದೆಗುಂದದೆ ಪುನಃ ಚೇತರಿಸಿಕೊಂಡು ಮುನ್ನಡೆಯಬೇಕು." ಆ ಮಹಾತಾಯಿಯು ನೀಡಿದ ಸ್ಫೂರ್ತಿಗೆ ಮುಂದೆ ಆ ಬಾಲಕನು ಸಾಧಿಸಿದ ಕಾರ್ಯವೇ ಸಾಕ್ಷಿಯಾಗಿದೆ. (ಬರಹ : ಸ್ವಾಮಿ ನಿತ್ಯಸ್ಥಾನಂದ)